ಇ.ಸಿ.ಎ.ಸಂಖ್ಯೆ: 3/2021
ಪಿ.ಡಬ್ಲ್ಯೂ: 1

**<u>ದಿನಾಂಕ:26-07-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುವರಿದ ಮುಖ್ಯ ವಿಚಾರಣೆ: ಅರ್ಜಿದಾರ ಪರ ಶ್ರೀ ವಿ.ಟಿ.ಟಿ. ವಕೀಲರಿಂದ:-</u>**

ನನ್ನ ಗಂಡ ಘಟನೆ ನಡೆದ ದಿನದಿಂದ ಅವರು ತೀರಿಕೊಳ್ಳುವವರೆಗೆ ಚಿಕಿತ್ಸೆ ಪಡೆಯುತ್ತಿದ್ದರು. ನನ್ನ ಗಂಡನಿಗೆ ಔಷಧಿ ತೆಗೆದುಕೊಳ್ಳುವಂತೆ ವೈದ್ಯರು ಸಲಹೆ ಮಾಡಿದ್ದರು. ನನ್ನ ಗಂಡ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೇ 2023 ರ ಡಿಸೆಂಬರ್ ತಿಂಗಳಲ್ಲಿ ತೀರಿಕೊಂಡಿರುತ್ತಾರೆ. ನನ್ನ ಗಂಡ 1 ನೇ ಎದುರುದಾರನ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಬಿದ್ದು ತಲೆಗೆ ಪೆಟ್ಟಾಗಿದ್ದರಿಂದ ಅವರ ಚಿಕಿತ್ಸೆ ಫಲಕಾರಿಯಾಗದೇ ತೀರಿಕೊಂಡಿರುತ್ತಾರೆ. ನಾನು ಮೃತರ ವೈವಾಹಿಕ ಪತ್ನಿಯಾಗಿದ್ದು ನನ್ನ ಮತ್ತು ನನ್ನ ಗಂಡನ ದಾಂಪತ್ಯ ಜೀವನದಲ್ಲಿ ಒಬ್ಬ ಮಗ ಜನಿಸಿರುತ್ತಾನೆ. ನನ್ನ ಮಗನಿಗೆ ಹಾಲಿ 9 ವರ್ಷ ವಯಸ್ಸಾಗಿದ್ದು ಆತ 4 ನೇ ತರಗತಿ ವ್ಯಾಸಂಗ ಮಾಡುತ್ತಿದ್ದಾನೆ. ನನ್ನ ಗಂಡನ ಜೀವಿತಾವಧಿಯಲ್ಲಿ ಅವರೇ ಕೆಲಸ ಮಾಡಿ ನನ್ನನ್ನು ಮತ್ತು ನನ್ನ ಮಗನನ್ನ ಸಾಕುತ್ತಿದ್ದರು. ನನ್ನ ಗಂಡ ತೀರಿಕೊಂಡಿದ್ದರಿಂದ ನನಗೆ ಮತ್ತು ನನ್ನ ಮಗನಿಗೆ ತುಂಬಲಾರದ ನಷ್ಟ ಉಂಟಾಗಿದೆ. ಆದ್ದರಿಂದ ನನ್ನ ಗಂಡನ ಸಾವಿನ ಬಾಬ್ತು ಪರಿಹಾರ ಕೊಡಿಸಬೇಕೆಂದು ಕೋರಿಕೊಳ್ಳುತ್ತೇನೆ.

ಆದ್ದರಿಂದ ನಾನು ಅರ್ಜಿಯಲ್ಲಿ ಕೋರಿದಂತೆ ಆದೇಶ ಮಾಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

**<u>ಪಾಟೀ ಸವಾಲು: 2 ನೇ ಎದುರುದಾರ ಪರ: ಶ್ರೀ ಕೆ.ವಿ.ಎಂ. ವಕೀಲರಿಂದ:-</u>**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ:ಹೇ:ಕೇ:ಸ:ಇ:ಎ:ಒ:

ಇ.ಸಿ.ಎ.ಸಂಖ್ಯೆ: **3/2023**
ಪಿ.ಡಬ್ಲ್ಯೂ: **1**

**ಸಹಿ/-**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.**

ಎಸ್‌ಆರ್: